**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** 2015-16ನೇ ಸಾಲಿಗೆ ಹಿಂದುಳಿದ ಪ್ರದೇಶಗಳ ಅನುದಾನ ನಿಧಿ (BRGF) ಯೋಜನೆಯಡಿಯಲ್ಲಿ ಯಾದಗಿರಿ ಜಿಲ್ಲೆಗೆ 2 ಮತ್ತು 3ನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**

1. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತಿ ಯಾದಗಿರಿ ಇವರ ಪತ್ರ ಸಂಖ್ಯೆ:ಜಿಪಂಯಾ/ಯೋಶಾ/ಬಿ.ಆರ್.ಜಿ.ಎಫ್/2015-16/135&136ದಿನಾಂಕ:18.06.2015
2. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 227 ವೆಚ್ಚ-6/2016 ದಿನಾಂಕ:19.05.2015

**ಪ್ರಸ್ತಾವನೆ:**

ಹಿಂದುಳಿದ ಪ್ರದೇಶಗಳ ಅನುದಾನ ನಿಧಿ (BRGF) ಯೋಜನೆಯಡಿಯಲ್ಲಿ ಕರ್ನಾಟಕ ಸರ್ಕಾರವು 2015-16ನೇ ಆರ್ಥಿಕ ಸಾಲಿಗೆ ರೂ. 112.00 ಕೋಟಿಗಳ (ರೂಪಾಯಿ ಒಂದು ನೂರಾ ಹನ್ನೆರಡು ಕೋಟಿಗಳು ಮಾತ್ರ) ಅನುದಾನವನ್ನು ವಿವಿಧ ಜಿಲ್ಲೆಗಳಿಗೆ ಎದುರಾಗಿ ಹಂಚಿಕೆ ಮಾಡಿರುತ್ತದೆ. ಇದರಲ್ಲಿ ಯಾದಗಿರಿ ಜಿಲ್ಲೆಗೆ 2ಮತ್ತು 3ನೇ ಕಂತಿನ ಅನುದಾನ ರೂ.13,38,00,000.00(ಹದಿಮೂರು ಕೋಟಿ ಮೂವತ್ತೆಂಟು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಬಿಡುಗಡೆಗೊಳಿಸಲು ಉದ್ದೇಶಿಸಲಾಗಿದೆ. ಅದರಂತೆ ಹಿಂದುಳಿದ ಪ್ರದೇಶಗಳ ಅನುದಾನ ನಿಧಿ (BRGF) ಯೋಜನೆಯ ಉದ್ದೇಶಗಳನ್ನು ಅನುಷ್ಠಾನಗೊಳಿಸಲು ವಿವಿಧ ಘಟಕಗಳಿಗೆ ಎದುರಾಗಿ ಯಾದಗಿರಿ ಜಿಲ್ಲೆಗೆ ಬಿಡುಗಡೆಗೊಳಿಸುವ ಕುರಿತು ಈ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 126 ಜಿಪಸ 2015, ಬೆಂಗಳೂರು, ದಿನಾಂಕ:01-03-2016.**

ಮೇಲಿನ ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ಹಿಂದುಳಿದ ಪ್ರದೇಶಗಳ ಅನುದಾನ ನಿಧಿ (BRGF) ಯೋಜನೆಯನ್ನು ಮಾರ್ಗಸೂಚಿಯ ಅನುಸಾರ ಅನುಷ್ಠಾನಗೊಳಿಸಲು 2015-16ನೇ ಆರ್ಥಿಕ ಸಾಲಿಗೆ ಯಾದಗಿರಿ ಜಿಲ್ಲೆಗೆ 2ಮತ್ತು 3ನೇ ಕಂತಿನ ಅನುದಾನವಾಗಿ ರೂ.13,38,00,000.00(ಹದಿಮೂರು ಕೋಟಿ ಮೂವತ್ತೆಂಟು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಬಿಡುಗಡೆಗೊಳಿಸಲು ಉದ್ದೇಶಿಸಲಾಗಿದೆ. ಈ ಕೆಳಕಾಣಿಸಿದ ಘಟಕಗಳಿಗೆ ಎದುರಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಯಾದಗಿರಿ ಜಿಲ್ಲಾ ಪಂಚಾಯತಿ, ಇವರಿಗೆ ಬಿಡುಗಡೆಗೊಳಿಸಿ ಆದೇಶಿಸಿದೆ.

| ಕ್ರ.ಸಂ | ಘಟಕಗಳು | ಬಿಡುಗಡೆಗೊಳಿಸಿದ ಮೊತ್ತ ರೂ. ಗಳಲ್ಲಿ |
|---|---|---|
| 1 | ವಾರ್ಷಿಕ SCPSC ಜಿಲ್ಲಾ ಯೋಜನಾ ಉಪ ಘಟಕ | 27,96,420–00 |
| 2 | ವಾರ್ಷಿಕ STSP ಜಿಲ್ಲಾ ಯೋಜನಾ ಉಪ ಘಟಕ | 1,50,12,360–00 |
| 3 | ವಾರ್ಷಿಕ Non-SCPSC ಮತ್ತು STSP ಜಿಲ್ಲಾ ಯೋಜನಾ ಉಪ ಘಟಕ | 11,59,91,220–00 |
| ಒಟ್ಟು (ಹದಿಮೂರು ಕೋಟಿ ಮೂವತ್ತೆಂಟು ಲಕ್ಷ ರೂಪಾಯಿಗಳು ಮಾತ್ರ) | | **13,38,00,000.00** |

ಈ ಆದೇಶದ ಮೂಲಕ ಬಿಡುಗಡೆಗೊಳಿಸಿರುವ ರೂ.13,38,00,000.00(ಹದಿಮೂರು ಕೋಟಿ ಮೂವತ್ತೆಂಟು ಲಕ್ಷ ರೂಪಾಯಿಗಳು ಮಾತ್ರ)ಗಳ ಅನುದಾನವನ್ನು 2015–16ನೇ ಆರ್ಥಿಕ ಸಾಲಿನ ಸಮವಿಕಾಸ ಯೋಜನೆಯ ಲೆಕ್ಕಶೀರ್ಷಿಕೆ 2575–02–196–1–01(ಯೋಜನೆ) ಅಡಿಯಲ್ಲಿ Lumpsum-ZPರಲ್ಲಿ ಕಲ್ಪಿಸಲಾಗಿರುವ ರೂ. 112.00 ಕೋಟಿಗಳ ಪೈಕಿ (ಜಿಲ್ಲಾ ವಲಯಕ್ಕೆ ಸಂಬಂಧಿಸಿದಂತೆ Link Documentನಲ್ಲಿ ತಿಳಿಸಿರುವ ಹೊಸ ಲೆಕ್ಕ ಶೀರ್ಷಿಕೆ 2575–00–101–0–26 (ಹಿಂದುಳಿದ ಪ್ರದೇಶಗಳ ಅನುದಾನ ನಿಧಿ))ರಡಿ ಭರಿಸುವುದು.

**ಈ ಆದೇಶದ ಮೂಲಕ ಬಿಡುಗಡೆಗೊಳಿಸಿದ ಅನುದಾನವು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.**

1. ಸದರಿ ಅನುದಾನವನ್ನು 2014–15ನೇ ಸಾಲಿನಲ್ಲಿ ಅನುಮೋದನೆಗೊಂಡ ಹಾಗೂ ಅಪೂರ್ಣಗೊಂಡ ಕಾಮಗಾರಿಗಳಿಗೆ ಮಾತ್ರ ಕಡ್ಡಾಯವಾಗಿ ಬಳಸಲು ತಿಳಿಸಿದೆ.
2. ಹಿಂದುಳಿದ ಪ್ರದೇಶಗಳ ಅನುದಾನ ನಿಧಿ (BRGF) ಯೋಜನೆಯ ಮಾರ್ಗಸೂಚಿ ಕ್ರಮ ಸಂಖ್ಯೆ 4.(8) ರ ಅನ್ವಯ ಈ ಅನುದಾನವನ್ನು ಖಜಾನೆಯಿಂದ ಸೆಳೆದು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಜಮೆ ಮಾಡತಕ್ಕದ್ದು.
3. ಘಟಕವಾರು ಹಂಚಿಕೆ ಮಾಡಲಾದ ಅನುದಾನಕ್ಕೆ ಘಟಕವಾರು ಪ್ರತ್ಯೇಕ ಹಣ ಬಳಕೆ ಪತ್ರಗಳನ್ನು ನಿಗಧಿತ ನಮೂನೆಯಲ್ಲಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

4. <u>ಆರ್ಥಿಕ ಮತ್ತು ಭೌತಿಕ ವಿವರಗಳನ್ನೊಳಗೊಂಡ ಘಟಕವಾರು ಪ್ರತ್ಯೇಕ ಪ್ರಗತಿ ವರದಿಗಳನ್ನು ನಿಗಧಿತ ನಮೂನೆಯಲ್ಲಿ ಪ್ರತಿ ಮಾಹೆ 7ನೇ ದಿನಾಂಕದೊಳಗೆ ಸರ್ಕಾರಕ್ಕೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.</u>

5. ಈ ಆದೇಶದ ಮೂಲಕ ಬಿಡುಗಡೆಗೊಳಿಸಿದ ಅನುದಾನದ ವಿನಿಯೋಗಕ್ಕೆ ಸಂಬಂಧಿಸಿದಂತೆ ಸಂಬಂಧಿಸಿದ ಪ್ರಾಧಿಕಾರದಿಂದ ಲೆಕ್ಕ ಪರಿಶೋಧನೆ ನಡೆಸಿ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸುವುದು.

6. ಯೋಜನೆಯ ಮಾರ್ಗಸೂಚಿ ಕ್ರಮ ಸಂಖ್ಯೆ 4.(6)ರ ಅನ್ವಯ; ಅನುದಾನವು ಸರ್ಕಾರದಿಂದ ಜಿಲ್ಲಾ ಪಂಚಾಯತಿಗೆ ಬಿಡುಗಡೆಗೊಂಡ ಹದಿನೈದು ದಿವಸಗಳೊಳಗಾಗಿ ಯೋಜನೆ ಅನುಷ್ಠಾನಗೊಳಿಸುವ ಪ್ರಾಧಿಕಾರಗಳಾದ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಮುನಿಸಿಪಾಲಿಟಿ ಮತ್ತು ಇತರೆ ಸಂಘ ಸಂಸ್ಥೆಗಳಿಗೆ ಅವರು ಕ್ರಿಯಾ ಯೋಜನೆ ತಯಾರಿಸಿದ ಮೊತ್ತಕ್ಕೆ ಅನುಸಾರವಾಗಿ ಅನುದಾನವನ್ನು ಜಿಲ್ಲಾ ಪಂಚಾಯತಿಯು ಬಿಡುಗಡೆ ಮಾಡತಕ್ಕದ್ದು. ತಪ್ಪಿದಲ್ಲಿ, ಭಾರತೀಯ ರಿಸರ್ವ್ ಬ್ಯಾಂಕ್‌ನ ದರದ ಅನ್ವಯ ದಂಡ ರೂಪದಲ್ಲಿ ಬಡ್ಡಿಯನ್ನು ಪಾವತಿಸಬೇಕಾಗುತ್ತದೆ.

7. <u>**ಹಿಂದುಳಿದ ಪ್ರದೇಶಗಳ ಅನುದಾನ ನಿಧಿ (BRGF) ಯೋಜನೆಯ ಕ್ರಿಯಾ ಯೋಜನೆಯನ್ನು Plan Plus ನಲ್ಲಿ ತಯಾರಿಸಿ, ಪ್ರಗತಿ ವರದಿಯನ್ನು Action soft ತಂತ್ರಾಂಶದಲ್ಲಿ ಅಳವಡಿಸಿ ಜಿಲ್ಲಾ ಪಂಚಾಯತಿಯ ಗಣಕಜಾಲದಲ್ಲಿ(ವೆಬ್‌ಸೈಟ್) ಪ್ರದರ್ಶಿಸುವುದು ಕಡ್ಡಾಯವಾಗಿದೆ. ಇದುವರೆಗೆ ಗಣಕಜಾಲದಲ್ಲಿ ಪ್ರದರ್ಶಿಸದಿದ್ದಲ್ಲಿ ಕೂಡಲೇ ಪ್ರದರ್ಶಿಸಲು ಕ್ರಮವಹಿಸುವುದು**</u>. ತಪ್ಪಿದಲ್ಲಿ ನೇರವಾಗಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.

8. ಹಿಂದುಳಿದ ಪ್ರದೇಶಗಳ ಅನುದಾನ ನಿಧಿ (BRGF) ಯೋಜನೆಯ ಪ್ರಗತಿಯನ್ನು ಜಿಲ್ಲೆಯಲ್ಲಿ ನಡೆಯುವ ಜಿಲ್ಲಾ ಅಭಿವೃದ್ಧಿ ಯೋಜನೆಯ ಪ್ರಗತಿ ಪರಿಶೀಲನೆ ಸಭೆ (KDP Meeting), <u>**ಪಂಚಾಯತ್ ರಾಜ್ ಸಂಸ್ಥೆಗಳ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಪ್ರತಿ ತಿಂಗಳ ಸಾಮಾನ್ಯ ಸಭೆಯಲ್ಲಿ ಕಡ್ಡಾಯವಾಗಿ ಪ್ರಗತಿ ವರದಿಯನ್ನು ನಮೂದಿಸಿ ಅದರ ಬಗ್ಗೆ ಪರಿಶೀಲನೆ ಮಾಡುವುದು.**</u>

9. ಹಿಂದುಳಿದ ಪ್ರದೇಶಗಳ ಅನುದಾನ ನಿಧಿ (BRGF) ಯೋಜನೆಯ ಅನುಷ್ಠಾನವನ್ನು <u>**ಪ್ರತಿ ವರ್ಷ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನಡೆಯುವ ಜಮಾಬಂಧಿಯಲ್ಲಿ ಗ್ರಾಮ ಪಂಚಾಯತಿ**</u>

**<u>ಯೋಜನೆ, ತಾಲ್ಲೂಕು ಪಂಚಾಯತಿ ಯೋಜನೆ ಹಾಗೂ ಜಿಲ್ಲಾ ಪಂಚಾಯತಿ ಯೋಜನೆಯನ್ನು ಕಡ್ಡಾಯವಾಗಿ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ನಡೆಸುವುದು.</u>**

10. ಹಿಂದುಳಿದ ಪ್ರದೇಶಗಳ ಅನುದಾನ ನಿಧಿ (BRGF) ಯೋಜನೆಯ ಅನುಷ್ಠಾನದ ಸಲುವಾಗಿ ಕನಿಷ್ಠ 2 ತಿಂಗಳಿಗೊಮ್ಮೆ ಜಿಲ್ಲಾ ಯೋಜನಾ ಸಮಿತಿ (DPC)ಯ ಸಭೆ ಮತ್ತು ಅಭಿವೃದ್ಧಿ ಯೋಜನೆಯ ಸಭೆಗಳನ್ನು ನಡೆಸಬೇಕು ಅಲ್ಲದೇ ಬಿಆರ್‌ಜಿಎಫ್ ಪ್ರಗತಿ ಪರಿಶೀಲನೆಯನ್ನು ಸಹ ಕಡ್ಡಾಯವಾಗಿ ನಡೆಸುವುದು.
11. ಬಿ.ಆರ್.ಜಿ.ಎಫ್. ಯೋಜನೆಯ ಅನುಷ್ಠಾನದಲ್ಲಿ ಜಿಲ್ಲಾಧಿಕಾರಿಗಳ ಮೂಲಕ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಆಗುವುದರಿಂದ ಕಡ್ಡಾಯವಾಗಿ ಜಿಲ್ಲಾಧಿಕಾರಿಗಳು DPC ಸಭೆಗಳಲ್ಲಿ ಭಾಗವಹಿಸಬೇಕು. ಜಿಲ್ಲಾಧಿಕಾರಿಗಳು ಸಕ್ರಿಯವಾಗಿ ಭಾಗವಹಿಸಿ ಪ್ರತಿ ಮಾಹೆ ಯೋಜನೆ ಅನುಷ್ಠಾನದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನೆರವು ನೀಡುವುದು.
12. ಬಿಆರ್‌ಜಿಎಫ್ ಅನುದಾನದ ಯಾವುದೇ ತರಬೇತಿ ಕಾರ್ಯಕ್ರಮಗಳನ್ನು ಅಥವಾ ಮಾನ್ಯತೆ ಭೇಟಿಗಳಾಗಲಿ (Exposure Visits), ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರವಾಗಲಿ ಅಥವಾ ಪಂಚಾಯತ ರಾಜ್ ಸಂಸ್ಥೆಗಳ ಮುಖಾಂತರವಾಗಲಿ ಹಮ್ಮಿಕೊಳ್ಳಲು ಅನುದಾನವನ್ನು ಕಾಯ್ದಿರಿಸಬಾರದು. ಕಾರಣ ಸಾಮರ್ಥ್ಯವರ್ಧನೆ(Capacity Building) ತರಬೇತಿಗಾಗಿ ಎಸ್.ಐ.ಆರ್.ಡಿಗೆ ಕೇಂದ್ರ ಸರ್ಕಾರದಿಂದ ಪ್ರತ್ಯೇಕ ಅನುದಾನ ಬಿಡುಗಡೆಯಾಗುತ್ತದೆ.
13. ಬಿಆರ್‌ಜಿಎಫ್ ಯೋಜನೆಯಡಿಯಲ್ಲಿ 2007-08ನೇ ಸಾಲಿನಿಂದ ಸೃಜಿಸಲಾದ ಆಸ್ತಿಗಳನ್ನು e-Panchayat MMPಯ National Asset Directory ಯಲ್ಲಿ ಕಡ್ಡಾಯವಾಗಿ ಅಳವಡಿಸುವುದು.
14. ರಾಜ್ಯ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿಗೆ ಒದಗಿಸಲು ನಿಗಧಿತ ನಮೂನೆಗಳಾದ ಅನುಬಂಧ-I(A) & I(J) ಗಳಲ್ಲಿ ಕಡ್ಡಾಯವಾಗಿ ಮಾಹಿತಿಯನ್ನು ಪ್ರತಿ ಮಾಹೆಯಾನ 5ನೇ ದಿನಾಂಕದೊಳಗೆ ಸರ್ಕಾರಕ್ಕೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
15. SCPSC/ STSP ಕಾರ್ಯಗಳಿಗೆ ಆದ್ಯತೆ ನೀಡುವುದು ಹಾಗೂ ನಿಗಧಿತ ನಮೂನೆಯಲ್ಲಿ ಮಾಹಿತಿಯನ್ನು ಪ್ರತಿ ಮಾಹೆಯಾನ 3ನೇ ದಿನಾಂಕದೊಳಗೆ ಸರ್ಕಾರಕ್ಕೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
16. ಗ್ರಾಅಪ 73 ಜಿಪಸ 2013 ದಿನಾಂಕ: 29.12.2015 ರಂದು ಹೊರಡಿಸಲಾದ ಸುತ್ತೋಲೆಯ ಪ್ರಕಾರ ಕಡ್ಡಾಯವಾಗಿ ಕ್ರಮವಹಿಸುವುದು.

ಉಲ್ಲೇಖ(2)ರ ಟಿಪ್ಪಣಿಯ ಮೂಲಕ ಆರ್ಥಿಕ ಇಲಾಖೆ ಸಹಮತಿಯ ಹಾಗೂ ಸಂಖ್ಯೆ: ಎಫ್‌ಡಿ/01/ಟಿಎಫ್‌ಪಿ/2016, ದಿನಾಂಕ: 19-01-2016ರಲ್ಲಿ ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿದ ಅಧಿಕಾರದನ್ವಯ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಬಿ.ಥೋತ್ರೆ) 1/3
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ.),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

01.03.16

**ಪ್ರತಿಯನ್ನು ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಜಿ ಅಂಡ್ ಎಸ್ ಎಸ್ ಎ), ಕರ್ನಾಟಕ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಇ ಅಂಡ್ ಆರ್ ಎಸ್ ಎ), ಕರ್ನಾಟಕ, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (ಎ ಅಂಡ್ ಇ), ಕರ್ನಾಟಕ, ಬೆಂಗಳೂರು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಇವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಕರ್ನಾಟಕ ಸರ್ಕಾರ, ಬೆಂಗಳೂರು
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ.ಪಂ.ರಾಜ್ ಇಲಾಖೆ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಇವರ ಆಪ್ತ ಕಾರ್ಯದರ್ಶಿಗಳು ಯೋಜನಾ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಇವರ ಆಪ್ತ ಕಾರ್ಯದರ್ಶಿಗಳು.ಆರ್ಥಿಕ ಇಲಾಖೆ, ಬೆಂಗಳೂರು,
9. ಸರ್ಕಾರದ ವಿಶೇಷಾಧಿಕಾರಿಗಳು (ಜಿಲ್ಲಾ ಪಂಚಾಯತಿ), ಆರ್ಥಿಕ ಇಲಾಖೆ, ಬೆಂಗಳೂರು.
10. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಪಂ.ರಾಜ್ ಇಲಾಖೆ, ಬೆಂಗಳೂರು.
11. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಯಾದಗಿರಿ.
12. ನಿರ್ದೇಶಕರು, ಖಜಾನೆ ಗಣಕ ಜಾಲ, ಖನಿಜ ಭವನ, ಬೆಂಗಳೂರು.
13. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
14. ಜಿಲ್ಲಾ ಖಜಾನಾಧಿಕಾರಿಗಳು, ಯಾದಗಿರಿ.
15. ಶಾಖಾ ರಕ್ಷಾ ಕಡತಕ್ಕೆ.
16. ಕಛೇರಿ / ಹೆಚ್ಚುವರಿ ಪ್ರತಿ.